## ದಿನಾಂಕ : 01-10-2021 ರಂದು ಬೆಳಗ್ಗೆ 11:00 ಗಂಟೆಗೆ ವಾರ್ಡ್-113ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-113 ಕೊನೇನ ಅಗ್ರಹಾರ ವಾರ್ಡ್ ಕಛೇರಿಯಲ್ಲಿ ದಿನಾಂಕ : 01-10-2021 ರಂದು ಬೆಳಿಗ್ಗೆ 11:00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

### ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು

1. ಶ್ರೀ.ಎಂ.ಜಿ.ಹೆಗ್ಡೆ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-113.
2. ಶ್ರೀ.ವಿ.ಸಾಮಂದಯ್ಯ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಧನ್ವಂತ್ – ಎ.ಇ.ಇ ಬಿಡಬ್ಲ್ಯೂಎಸ್ಎಸ್‌ಬಿ
4. ಶ್ರೀ.ಲೋಹಿತ್ – ಕಿ.ಇ ಬಿಡಬ್ಲ್ಯೂಎಸ್ಎಸ್‌ಬಿ
5. ಶ್ರೀ.ಪ್ರವೀಣ್ – ಕಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ.ರಾಮಸ್ವಾಮಿ – ಸದಸ್ಯರು
7. ಶ್ರೀ.ಉಶಾ ಶಂಕರ್ – ಸದಸ್ಯರು
8. ಶ್ರೀಮತಿ.ಪೂರ್ಣಿಮಾ ಶೆಟ್ಟಿ – ಸದಸ್ಯರು
9. ಶ್ರೀ.ಆರ್.ವಿಜಯಕುಮಾರ್ – ಸದಸ್ಯರು
10. ಶ್ರೀ.ಎಸ್.ಜೈಯ್‌ಕುಮಾರ್ – ಸದಸ್ಯರು
11. ಶ್ರೀ.ಪಿ.ಎಂ.ಏಕಾಂಬರೇಶ್ ರೆಡ್ಡಿ – ಸದಸ್ಯರು
12. ಶ್ರೀ.ಮುರಳಿ ಮೋಹನ್ – ಸದಸ್ಯರು
13. ಶ್ರೀ.ಎಸ್.ಪದ್ಮನಾಭ – ಸದಸ್ಯರು
14. ಶ್ರೀ.ಮಹಮದ್ ಶರೀಫ್ – ಸದಸ್ಯರು
15. ಶ್ರೀ.ಎನ್.ಎ.ಮುದ್ದಪ್ಪ – ಸದಸ್ಯರು
16. ಶ್ರೀ.ರಾಮಚಂದ್ರ – ಸದಸ್ಯರು
17. ಶ್ರೀ.ಕೆ.ಫಯಾಜ್ ಅಹ್ಮದ್ – ಸದಸ್ಯರು

ಪ್ರಥಮವಾಗಿ ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಮಾತನಾಡಿದರು. ನಂತರ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ವಿ.ಸಾಮಂದಯ್ಯರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ನಂತರದಲ್ಲಿ ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಲಾಯಿತು ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದ್ದರು.

- ಶ್ರೀ.ಮಹಮದ್ ಶರೀಫ್ ರವರು ಮತ್ತು ಶ್ರೀ.ಜೈಕುಮಾರ್ ರವರು ಮಾತನಾಡಿ, ಮಾಸಿಕದಲ್ಲಿ 2 ಭಾರಿ ವಾರ್ಡ್ ಸಭೆಗಳನ್ನು ನಡೆಸಬೇಕೆಂದು ಸಭೆಗೆ ತಿಳಿಸಿದರು, ಇದಕ್ಕೆ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಯವರು ಸ್ಪಂದಿಸಿ, ಈ ಬಗ್ಗೆ ಅವಶ್ಯಕವಾಗಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

➢ ಶ್ರೀ.ರಾಮಚಂದ್ರ ರವರು ಮಾತನಾಡಿ, ಕೋನೇನ ಅಗ್ರಹಾರದಲ್ಲಿ ಮನೆಯ ಮುಂದೆ ರ್‍ಯಾಂಪ್‌ಗಳನ್ನು ರಸ್ತೆಯ ಮಧ್ಯ ಭಾಗದವರೆಗೆ ನಿರ್ಮಿಸುತ್ತಿದ್ದು, ಈ ರ್‍ಯಾಂಪ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು, ಇದಕ್ಕೆ ಸಹಾಯಕ ಅಭಿಯಂತರರು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

➢ ಶ್ರೀಮತಿ.ಪೂರ್ಣಿಮಾ ಶೆಟ್ಟಿ ರವರು ಮಾತನಾಡಿ, ವಾರ್ಡಿನಲ್ಲಿ ಅಲ್ಲಲ್ಲಿ ಕಸ ಇರುತ್ತದೆ. ಇದನ್ನು ತೆಗೆಸುವಂತೆ ಸಭೆಗೆ ತಿಳಿಸಿದರು, ಇದಕ್ಕೆ ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

➢ ಶ್ರೀ.ಜೈಕುಮಾರ್ ರವರು ಮಾತನಾಡಿ ವಾರ್ಡ್‌ನಲ್ಲಿ ಒಣ ಕಸ, ಹಸಿ ಕಸ ಮತ್ತು ರಸ್ತೆ ಗುಡಿಸುವಿಕೆ ಬಗ್ಗೆ ತೆಗೆದುಕೊಂಡಿರುವ ಕ್ರಮ ಏನೆಂದು ಸಭೆಗೆ ತಿಳಿಸುವಂತೆ ಹಿರಿಯ ಆರೋಗ್ಯ ಪರೀಕ್ಷಕರಿಗೆ ಕೇಳಿದರು. ಇದಕ್ಕೆ ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ನಮ್ಮ ವಾರ್ಡ್‌ನಲ್ಲಿ 16 ಬ್ಲಾಕ್ ಇರುತ್ತದೆ. 16 ಆಟೋ ಟಿಪ್ಪರ್‌ಗಳು ಇರುತ್ತವೆ, ಕಸ ವಿಲೇವಾರಿ ಮಾಡಲು ಕ್ರಿಯಾ ಯೋಜನೆಯನ್ನು ಸಭೆಯಲ್ಲಿ ಎಲ್ಲಾ ಸದಸ್ಯರ ಮುಂದೆ ಬ್ಲಾಕ್ ವಾರ್ ಆಟೋ ಚಾಲಕರು, ಆಟೋ ಸಂಖ್ಯೆ ಹಾಗೂ ಚಾಲಕರ ಮೊಬೈಲ್ ಸಂಖ್ಯೆ ಈ ಎಲ್ಲಾ ಮಾಹಿತಿಯನ್ನು ವಾರ್ಡ್ ಸದಸ್ಯರಿಗೆ ನೀಡಲಾಗಿರುತ್ತದೆ. ಒಣ ಕಸವನ್ನು ತೆಗೆಯಲು ಸ್ಥಳೀಯ ಚಾಲಕರನ್ನು ನಿಯೋಜಿಸಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು.

➢ ಶ್ರೀ.ಮಹಮದ್ ಶರೀಫ್ ಮತ್ತು ಶ್ರೀಮತಿ.ಪೂರ್ಣಿಮಾ ಶೆಟ್ಟಿ ರವರು ಮಾತನಾಡಿ, ವಾರ್ಡ್‌ನಲ್ಲಿ 3 ತಿಂಗಳುಗಳಾದರೂ ಸ್ವೀಪಿಂಗ್ ಕೆಲಸ ಕಾರ್ಯಗಳು ಸರಿಯಾಗಿ ಆಗುತ್ತಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಇನ್ನು ಮುಂದೆ 3 ದಿನಗಳಿಗೊಮ್ಮೆ ಸ್ವೀಪಿಂಗ್ ಕೆಲಸ ಮಾಡಲು ಕಳುಹಿಸುವುದಾಗಿ ಸಭೆಗೆ ತಿಳಿಸಿದರು.

➢ ಶ್ರೀ.ರಾಮಚಂದ್ರ ರವರು ಮಾತನಾಡಿ ಜೈನ್ ದೇವಸ್ಥಾನದ ಹತ್ತಿರ ಕಸ ಪಾಯಿಂಟ್ ಇದ್ದು, ಇದನ್ನು ತೆರವುಗೊಳಿಸಬೇಕೆಂದು ಸಭೆಗೆ ತಿಳಿಸಿದರು. ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಸ್ಪಂದಿಸಿ ಕೂಡಲೇ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

➢ ಶ್ರೀ.ಯಾದವ್ ರವರು ಮಾತನಾಡಿ ಕೋಡಿಹಳ್ಳಿ ಹತ್ತಿರ ಕಸವನ್ನು ಹಾಕುವುದಕ್ಕೆ ಕಸದ ಬುಟ್ಟಿಗಳನ್ನು (ಡಸ್ಟ್‌ಬಿನ್) ಅಳವಡಿಸಲು ಸಭೆಗೆ ತಿಳಿಸಿದರು, ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಸ್ಪಂದಿಸಿ ಸದರಿ ರಸ್ತೆಯಲ್ಲಿ ಕಸದ ಬುಟ್ಟಿಗಳನ್ನು (ಡಸ್ಟ್‌ಬಿನ್) ಅಳವಡಿಸಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

➢ ಶ್ರೀ.ಜೈಕುಮಾರ್ ರವರು ಮಾತನಾಡಿ ಬಿ.ಡಿ.ಎ ಬಡಾವಣೆ 8ನೇ ಅಡ್ಡರಸ್ತೆಯಲ್ಲಿ ಸರಿಯಾಗಿ ನೀರು ಪೂರೈಕೆಯಾಗುತ್ತಿಲ್ಲವೆಂದು ಸಭೆಗೆ ತಿಳಿಸಿದರು, ಇದಕ್ಕೆ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಸ್ಪಂದಿಸಿ, ಕೊಳವೆಗಳು ಬ್ಲಾಕ್ ಆಗಿರುತ್ತದೆ, ಕೊಳವೆಗಳಲ್ಲಿ ಬ್ಲಾಕೇಜ್‌ನ್ನು ಸರಿಪಡಿಸಿ, ನೀರನ್ನು ಪೂರೈಕೆ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು,

➢ ಶ್ರೀ.ಚಂದ್ರ ಶೇಖರ್ ರೆಡ್ಡಿ ರವರು ಮಾತನಾಡಿ, ನಂಜಾರೆಡ್ಡಿ ಮತ್ತು ತಿಮ್ಮಾರೆಡ್ಡಿ ಕಾಲೋನಿಗಳಲ್ಲಿ ನೀರಿನ ಸಮಸ್ಯೆ ಇರುತ್ತದೆ ಎಂದು ಸಭೆಗೆ ತಿಳಿಸಿದರು, ಇದಕ್ಕೆ ಸಂಬಂಧಪಟ್ಟ

ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಸ್ಪಂದಿಸಿ, ಸೂಕ್ತ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

- ಶ್ರೀ.ಯಾದವ್ ರವರು ಮಾತನಾಡಿ ಕೋಡಿಹಳ್ಳಿಯಲ್ಲಿ ಆಂಜನೇಯ ದೇವಸ್ಥಾನದ ಹತ್ತಿರ ನೀರಿನ ವಾಲ್ವ್ ಅಳವಡಿಸಬೇಕೆಂದು ಸಭೆಗೆ ತಿಳಿಸಿದರು, ಇದಕ್ಕೆ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಸ್ಪಂದಿಸಿ, ಸೂಕ್ತ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

- ಶ್ರೀ.ಪದ್ಮನಾಭ ರವರು ಮಾತನಾಡಿ ಎಲ್.ಜಿ.ಸಿ.ಎಲ್ ವಿಲ್ಲಾಗೆ 2 1/2 ಇಂಚಿನ ಪೈಪ್‌ನ್ನು ಅಳವಡಲಾಗಿರುತ್ತದೆ, ಇದರಿಂದ ಬಿ.ಡಿ.ಎ ಲೇಔಟ್‌ಗೆ ನೀರಿನ ಸಮಸ್ಯೆ ಉದ್ಭವವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು ಇದಕ್ಕೆ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಸ್ಪಂದಿಸಿ, ಇದನ್ನು ಪರಿಶೀಲಿಸಿ 2 ಇಂಚಿನ ಪೈಪ್‌ನ್ನು ಅಳವಡಿಸಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

- ನೋಡಲ್ ಅಧಿಕಾರಿಯವರು ಮಾತನಾಡಿ 2021-22ನೇ ಸಾಲಿನ ಕಾಮಗಾರಿಗಳಿಗೆ ಹಂಚಿಕೆಯಾಗಿರುವ ಅನುದಾನ ಬಗ್ಗೆ ವಿವರವಾಗಿ ಸಭೆಗೆ ತಿಳಿಸಿದರು.

- ಶ್ರೀ.ಚಂದ್ರ ಶೇಖರ್ ರೆಡ್ಡಿ ರವರು ಮತ್ತು ಶ್ರೀ.ಏಕಾಂಬರೇಶ್ ರೆಡ್ಡಿ ರವರು ಮಾತನಾಡಿ ವಾರ್ಡ್‌ನಲ್ಲಿ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು ಎಂದು ತಿಳಿಸಿ ಎಂದು ಸಭೆಗೆ ತಿಳಿಸಿದರು, ಇದಕ್ಕೆ ಸಂಬಂಧಪಟ್ಟ ಸಹಾಯಕ ಅಭಿಯಂತರರು ಸ್ಪಂದಿಸಿ, ಕೂಲಂಕುಷವಾಗಿ ವಾರ್ಡ್‌ನಲ್ಲಿ ಬೊರ್‌ವೆಲ್‌ಗಳನ್ನು ಕೊರೆದಿರುವ ಬಗ್ಗೆ ಸ್ಥಳಗಳೊಂದಿಗೆ ವಿವರವಾಗಿ ಸಭೆಗೆ ತಿಳಿಸಿದರು.

- ವಾರ್ಡ್‌ನ ವ್ಯಾಪ್ತಿಯಲ್ಲಿರುವ ಸ್ಮಶಾನದ ಅಭಿವೃದ್ದಿಯ ಬಗ್ಗೆ ಎಲ್ಲಾ ಸದಸ್ಯರು ಮಾತನಾಡಿ ಇದರ ಬಗ್ಗೆ ಹೆಚ್.ಎ.ಎಲ್ ರವರ ಹತ್ತಿರ ಹೋಗಿ ಮಾತನಾಡುವುದಕ್ಕೆ ಒಂದು ದಿನಾಂಕವನ್ನು ನಿಗಧಿಪಡಿಸಿ, ಆ ದಿನಾಂಕದಂದು ಎಲ್ಲಾ ಸದಸ್ಯರುಗಳು ಹೋಗಿ ಮಾತನಾಡುವಂತೆ ಸಭೆಯಲ್ಲಿ ತಿಳಿಸಿದರು.

- ಕೋವಿಡ್ ಕಿಟ್‌ಗಳನ್ನು ವಿತರಣೆ ಮಾಡುವ ಬಗ್ಗೆ ಈ ಹಿಂದೆ ಸಭೆಯಲ್ಲಿ ತೀರ್ಮಾನವಾಗಿತ್ತು, ಇದರ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ-113**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ 113**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 113**